ಆದುದರಿಂದ ಸರ್ಕಾರದ ಲೆವೆಲ್‌ನಲ್ಲಿ ಪಿಡಬ್ಲ್ಯೂಡಿಯಲ್ಲಿ ವರ್ಕ್‌ಔಟ್ ಮಾಡಿ ನೀವು ಸ್ಯಾಂಕ್ಷನ್ ಮಾಡಿ ಕೊಟ್ಟರೆ ಅವರು ಕೆಲಸವನ್ನು ಮಾಡುತ್ತಾರೆ. ಈಗ ನಮ್ಮ ತಿಪಟೂರು ಸದಸ್ಯರು ಹೇಳಿದ ಹಾಗೆ ನೀವು ಬರೀ ಬುಡಬುಡಕಿ ರೀತಿಯಲ್ಲಿ ಮಾತನಾಡುತ್ತೀರಷ್ಟೆ. ಇವೊತ್ತಿನ ದಿವಸ ಯಾವ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೈಯಲ್ಲಿ ಡೀಸಲ್ ಕೊಳ್ಳಲೂ ಕೂಡ ದುಡ್ಡಿಲ್ಲ. ಮೊನ್ನೆ ನಮ್ಮ ತಾಲ್ಲೂಕಿನಲ್ಲಿ ಕೆಲಸವಾಗಬೇಕಾದರೆ ಬೇಕಾದ ಡೀಸಲನ್ನು ನಾನು ಕೊಡಿಸಿ ಬಂದಿದ್ದೇನೆ. ಅಂದರೆ ಸರ್ಕಾರದವರು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಡೀಸಲ್ ಕೊಳ್ಳಲು ದುಡ್ಡನ್ನು ಕೊಟ್ಟಿಲ್ಲ. ಹೀಗಿರುವ ಸಂದರ್ಭದಲ್ಲಿ ಕೆರೆ ಹೂಳನ್ನು ತೆಗೆಸುತ್ತಾರೆಯೇ? ಯಾವ ಯಾವ ಇಂಜಿನ್‌ಗೆ ಎಷ್ಟೆಷ್ಟು ಡೀಸಲ್‌ಗಾಗಿ ದುಡ್ಡು ಕೊಟ್ಟಿದ್ದಾರೆ ಅದರ ಬಗ್ಗೆ ವಿವರ ಕೊಡಲಿ ನೋಡೋಣ.

ಅಧ್ಯಕ್ಷರು : ಈಗ ತಾವು ಎಲಾಬರೇಟ್ ಆಗಿ ರಿಪ್ಲೈಯನ್ನು ಕೊಟ್ಟಿದ್ದೀರಿ. ಇನ್ ಪ್ರಿನ್ಸಿಪಲ್ ಮೈನರ್ ಇರಿಗೇಷನ್‌ಗೆ ಹೆಚ್ಚಿಗೆ ಹಣ ಕೊಡಬೇಕು ಎಂಬ ಬಗ್ಗೆ ಹೇಳಿದ್ದೀರಲ್ಲದೆ ಈಗಲೂ ಕೂಡ ಅದು ಒಂದು ಮುಖ್ಯವಾದ ಭಾಗವಾಗಿರುತ್ತದೆ ಎಂದು ಹೇಳಿದ್ದಾರೆ. ಆದುದರಿಂದ ರಿಪ್ಲೈ ಮೇಲೆ ಮತ್ತೆ ಚರ್ಚೆ ಮಾಡುವುದು ಬೇಡ, ಶೂನ್ಯ ವೇಳೆಯೇ ಹೀಗೆ ಮುಂದುವರಿದರೆ ನನಗೆ ಕಷ್ಟವಾಗುತ್ತದೆ. ಈಗ ಮಧುಸ್ವಾಮಿಯವರು ಮಾತನಾಡಲಿ.

ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜು ಕಳಪೆ ಮಟ್ಟದ್ದಾಗಿರುವುದರ ಬಗ್ಗೆ ಪ್ರಸ್ತಾಪ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಅಸಮರ್ಪಕವಾಗಿ ಸರಬರಾಜಾಗುತ್ತಿದೆಯಾದ್ದರಿಂದ ರೈತರುಗಳಿಗೆ ಬಹಳ ತೊಂದರೆಯಾಗುತ್ತಿದೆ ಎಂಬ ಬಗ್ಗೆ ನಾವುಗಳು ಅನೇಕ ಬಾರಿ ಇಲ್ಲಿ ಪ್ರಸ್ತಾಪ ಮಾಡಿದರೂ ಕೂಡ ಯಾವುದೇ ಕಾರ್ಯಕ್ರಮವನ್ನು ಕೆ.ಇ.ಬಿ. ಯಾವರಾಗಲೀ ಅಥವಾ ಸರ್ಕಾರದವರಾಗಲಿ ತೆಗೆದುಕೊಳ್ಳಲಿಲ್ಲ. ಇದರ ಜೊತೆಗೆ ಭೀಕರ ಬಿರುಗಾಳಿಯಿಂದಾಗಿ ಚಿಕ್ಕನಾಯಕನಹಳ್ಳಿ ಮತ್ತು ಅರಸೀಕೆರೆಗಳಲ್ಲಿ ಕಿ.ಮೀ ಗಟ್ಟಲೆ ಕಂಬಗಳು ಮತ್ತು ವಿದ್ಯುತ್ ತಂತಿಗಳು ಕಟ್ ಆಗಿ ಕೆಳಗಡೆ ಬಿದ್ದಿರುವುದರಿಂದ ವಿದ್ಯುಚ್ಛಕ್ತಿ ಸರಬರಾಜನ್ನು ರೆಗ್ಯುಲರ್ ರೀತಿಯಲ್ಲಿ ಮಾಡುವುದಕ್ಕಾಗುತ್ತಿಲ್ಲ. ಇದನ್ನು ಸರಿಪಡಿಸಲು ಸರಿಯಾದ ರೀತಿಯಲ್ಲಿ ಮೆಟೀರಿಯಲ್‌ಗಳೂ ಕೂಡ ಇಲ್ಲಿಂದ ಸರಿಯಾಗಿ ಹೋಗುತ್ತಿಲ್ಲ. ಸುಮಾರು 15 ದಿವಸಗಳಿಂದ ನಮ್ಮ ಭಾಗದಲ್ಲಿ ವಿದ್ಯುತ್ ಸರಬರಾಜು ಸಮರ್ಪಕವಾಗಿ ಆಗುತ್ತಲೇ ಇಲ್ಲ. ಕೆ.ಇ.ಬಿ.ಯವರಿಗೆ ಅಲ್ಲಿಯ ಎಮರ್ಜೆನ್ಸಿಯನ್ನಾದರೂ ಟ್ಯಾಕಲ್ ಮಾಡಬೇಕು ಎನ್ನುವ ಸೌಜನ್ಯ ಕೂಡ ಇಲ್ಲ. ಇವೆಲ್ಲದರ ಜೊತೆಗೆ ಟ್ರಾನ್ಸ್‌ಫಾರ್ಮರ್‌ಗಳು ಬಂದಿಲ್ಲವೆಂದು ಹೇಳಿ ತುಮಕೂರು ಜಿಲ್ಲೆಯ ಉಸ್ತುವಾರಿ ಸಚಿವರು ಶಿರಾದಲ್ಲಿ ಎರಡು ಗಂಟೆಗಳ ಕಾಲ ಧರಣಿಯನ್ನು ಮಾಡಿದ್ದಾರೆ. ಇದರ ಬಗ್ಗೆ ನಾವೇನು ಹೇಳಬೇಕೋ ಅರ್ಥವಾಗುತ್ತಿಲ್ಲ. ಸನ್ಮಾನ್ಯ ಉಸ್ತುವಾರಿ ಸಚಿವರೇ ಎರಡು ಗಂಟೆಗಳ ಕಾಲ ಧರಣಿ ಮಾಡಿ ಕೆ.ಇ.ಬಿ ಪ್ರಿಮಿಸಸ್‌ನಲ್ಲಿ ವರ್ಕಿಂಗ್‌ನಲ್ಲಿದ್ದ ಟ್ರಾನ್ಸ್‌ಫಾರ್ಮರನ್ನು ತೆಗೆಸಿ ಯಾವುದೋ ಬೇರೆ ಹಳ್ಳಿಗೆ ಹಾಕಿಸಿದ್ದಾರೆ. ಈ

ರೀತಿಯಲ್ಲಿ ಸರ್ಕಾರ ನಡೆಯುತ್ತಿದ್ದರೆ ಘನತೆ, ಗೌರವ ಸರ್ಕಾರಕ್ಕೆ ಬರುತ್ತದೆಯೇ? ಇದರ ಬಗ್ಗೆ ನಾವ್ಯಾರನ್ನು ಕೇಳಬೇಕೋ ಗೊತ್ತಾಗುತ್ತಿಲ್ಲ. ನೀವೇ ನೇಮಕ ಮಾಡಿರುವ ಉಸ್ತುವಾರಿ ಸಚಿವರು ಎರಡು ಗಂಟೆಗಳ ಕಾಲ ಧರಣಿ ಮಾಡುವ ಸ್ಥಿತಿಗೆ ಹೋದರೆ ಇನ್ನು ಸಾಮಾನ್ಯ ಶಾಸಕರಾಗಿರುವ ಮತ್ತು ನಮ್ಮ ಕ್ಷೇತ್ರಕ್ಕೆ ನೀವೇ ಕೆಲಸ ಮಾಡಿಸುತ್ತೀರಿ ಎಂದು ನಂಬಿರುವ ನಾವುಗಳು ಯಾರನ್ನು ಈ ಬಗ್ಗೆ ಕೇಳಬೇಕು ಎಂದು ಅಧ್ಯಕ್ಷರ ಮುಖಾಂತರ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ನಾನು ತಿಳಿದಿರುವ ಹಾಗೆ ಸರ್ಕಾರ ನಡೆಸುವಂಥ ರೀತಿ ಖಂಡಿತ ಈ ರೀತಿಯಾಗಿರಬಾರದು. ನಾನು ಕೆಟ್ಟದಾಗಿ ಹೇಳಬೇಕು ಎಂದು ಈ ರೀತಿ ಹೇಳುತ್ತಿಲ್ಲ. ಇಂದು ಜನಗಳ ದೃಷ್ಟಿಯಲ್ಲಿ ನಾವು ತೀರ ಕೆಳಮಟ್ಟಕ್ಕೆ ಬಂದಿದ್ದೇವೆ. ಅಲ್ಲಿ ವಿದ್ಯುತ್ ಕಂಬಗಳು ಬಿದ್ದುಬಿಟ್ಟಿರುವುದು ಸುಮಾರು 15 ದಿನಗಳೇ ಆಗಿದೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ವಿದ್ಯುತ್ ಖಾತೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ಒಂದೇ ದಿನದಲ್ಲಿ ಸಿಡಿಲಿನಿಂದಾಗಿ ಬಹಳಷ್ಟು ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋಗಿವೆ. ಹೀಗಾಗಿ ಅಲ್ಲಿರತಕ್ಕಂಥ 25 ಕೆ.ವಿ. ಮತ್ತು 65 ಕೆ.ವಿ.ಗೆ ಸಂಬಂಧಪಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು ಈಗಾಗಲೇ ಅಳವಡಿಸಿದ್ದೇವೆ. ಆದರೆ 100 ಕೆ.ವಿ. ಟ್ರಾನ್ಸ್‌ಫಾರ್ಮರ್‌ಗಳು ಆಗ ಇರಲಿಲ್ಲ. ಮೊನ್ನೆ ತಾನೇ ಸುಮಾರು 400 ಟ್ರಾನ್ಸ್‌ಫಾರ್ಮರ್‌ಗಳನ್ನು ಮತ್ತು ಬೇಕಾದಂಥ ಇನ್ನಿತರ ಮೆಟೀರಿಯಲ್ಸ್‌ಗಳನ್ನು ತುಮಕೂರು, ಸಿರಾ ಮತ್ತು ಚಿಕ್ಕನಾಯಕನಹಳ್ಳಿಗೆ ಕಳುಹಿಸಿದ್ದೇವೆ. ಬಹಳಷ್ಟು ಕಡೆ ಈಗಾಗಲೇ ಕೆಲಸವನ್ನೂ ಕೂಡ ಮಾಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ತಿಂಗಳಿನಿಂದ ಡಿ.ಸಿ. ಕೊಟ್ಟಿಲ್ಲವೆಂದು ಮೊನ್ನೆ ಈ ಸರ್ಕಾರದ ಸಚಿವರೇ ಆದ ಸತ್ಯನಾರಾಯಣ್‌ರವರು ಧರಣಿ ಕುಳಿತಿದ್ದಾರೆ ಎಂದರೆ ಹೇಗೆ? ಈ ರೀತಿಯಲ್ಲಿ ಮಂತ್ರಿಗಳಾದವರೇ ಕೆ.ಇ.ಬಿ. ಕಛೇರಿ ಮುಂದೆ ಸ್ಟೈಕ್ ಮಾಡಿದರೆ ಜನ ಏನೆನ್ನಬೇಕು? ಮಂತ್ರಿಗಳು ಸ್ಟೈಕ್ ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಇವರು ಹೇಳಲಿ.

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ವಿದ್ಯುಚ್ಛಕ್ತಿ ಮಂತ್ರಿಗಳು ಬಹಳ ಸುಲಭವಾಗಿ ಒಂದೆರಡು ಮಾತನ್ನು ಹೇಳಿ ಕುಳಿತುಬಿಟ್ಟರೆ ಹೇಗೆ? ನಾವೆಷ್ಟು ಬಾರಿ ನಿಮಗೆ ಟ್ರಾನ್ಸ್‌ಫಾರ್ಮರ್‌ಗಳ ಬಗ್ಗೆ ಅರ್ಜಿಯನ್ನು ಕೊಟ್ಟಿದ್ದೇವೆ. ಮಾನ್ಯ ಮಂತ್ರಿಗಳಾದ ಸತ್ಯನಾರಾಯಣ್‌ರವರೇ ಧರಣಿಯನ್ನು ಅಲ್ಲಿ ಕುಳಿತಿದ್ದರಿಂದ ನಾವುಗಳೆಲ್ಲಾ ನಿಮ್ಮ ಮನೆ ಮುಂದೆ ಧರಣಿ ಕೂರಬೇಕಾಗುತ್ತದಷ್ಟೆ. ದಯಮಾಡಿ ಟ್ರಾನ್ಸ್‌ಫಾರ್ಮರ್‌ಗಳನ್ನು ಸರಿಮಾಡುವುದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಿ.

ಶ್ರೀ ಶರಣ ಬಸಪ್ಪ ದರ್ಶನಾಪುರ್ : ಅಲ್ಲಿಗೆ ಬೇಕಾಗಿರತಕ್ಕಂಥ ಟ್ರಾನ್ಸ್‌ಫಾರ್ಮರ್‌ಗಳನ್ನು ಮತ್ತು ವೈರ್ಸನ್ನೂ ಮುರ್ನಾಲ್ಕು ದಿನಗಳ ಹಿಂದೆಯೇ ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಇನ್ನೂ ಏನಾದರೂ ಸಮಸ್ಯೆ ಇದ್ದರೆ ಶಾಸಕರು ಹೇಳಬೇಕು. ಸರಿ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೆ.ಇ.ಬಿ. ಕಾಲೋನಿಯಲ್ಲಿದ್ದಂಥ ಟ್ರಾನ್ಸ್‌ಫಾರ್ಮರನ್ನು ಮಂತ್ರಿಗಳು ಕೀಳಿಸಿ ಬೇರೆ ಕಡೆಗೆ ಕಳುಹಿಸಿದ್ದಾರೆ. ಇದು ಸುಳ್ಳೇ? ಉರಿಯುತ್ತಿರುವ ಟ್ರಾನ್ಸ್‌ಫಾರ್ಮರನ್ನು

ಡಿಸ್‌ಕನೆಕ್ಟ್ ಮಾಡಿಸುವುದಕ್ಕೆ ನಿಮಗೆ ಅಧಿಕಾರವಿದೆಯೇ? ನೀವು ಸರ್ಕಾರ ನಡೆಸುವ ರೀತಿಯೇ ಇದು.

ಅಧ್ಯಕ್ಷರು : ಆಲ್‌ರೈಟ್, ಅದರ ಬಗ್ಗೆ ಡೀಟೈಲ್ಸ್ ಏನಿದೆಯೋ ಅದನ್ನು ಕೊಡಿಸೋಣ ಬಿಡಿ. ಯೋಗೀಶ್ ಭಟ್ ಈಗ ನೀವೇನೋ ಹೇಳಬೇಕು ಎಂದಿದ್ದೀರಲ್ಲಾ, ಅದನ್ನು ಹೇಳಿ.

ಕೆ.ಪಿ.ಎಸ್.ಸಿ. ಸೆಂಟರನ್ನು ಮಂಗಳೂರಿನಲ್ಲಿ ತೆರೆಯುವುದು

ಶ್ರೀ ಎನ್. ಯೋಗೀಶ್ ಭಟ್ : ಸರ್ಕಾರ ಕೆ.ಪಿ.ಎಸ್.ಸಿ ವತಿಯಿಂದ ಕೆ.ಎ.ಎಸ್. ಪರೀಕ್ಷೆಯನ್ನು ನಡೆಸುತ್ತಿರುವುದು ಸರಿಯಷ್ಟೆ. ಈ ಪರೀಕ್ಷೆಗೆ ರಾಜ್ಯಾದ್ಯಂತ ಸಾವಿರಾರು ವಿದ್ಯಾರ್ಥಿಗಳು ಕುಳಿತಿರುತ್ತಾರೆಯಾದ ಕಾರಣ ಕೊಡಗು ಮತ್ತು ಮಲೆನಾಡಿನ ಪ್ರದೇಶಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಮಂಗಳೂರಿನಲ್ಲೂ ಕೂಡ ಒಂದು ಪರೀಕ್ಷಾ ಉಪಕೇಂದ್ರವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಸರ್ಕಾರ ಅದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮಾಧುಸ್ವಾಮಿಯವರು ಎತ್ತಿದ ವಿಚಾರಕ್ಕೆ ಮಂತ್ರಿಗಳಿಂದ ಉತ್ತರ ಬರಲಿಲ್ಲ. ಮಂತ್ರಿಗಳೇ ಕೆ.ಇ.ಬಿ ಕಛೇರಿ ಮುಂದೆ ಧರಣಿ ಮಾಡುವುದು ಎಂದರೆ ಹೇಗೆ ಅಧ್ಯಕ್ಷರೇ, ಶಾಸಕರು ಧರಣಿ ಮಾಡುವುದನ್ನು ಎಲ್ಲರೂ ಕೇಳಿರುತ್ತಾರೆ, ಆದರೆ ಸರ್ಕಾರದ ಮಂತ್ರಿಯೇ ಹೀಗೆ ಮಾಡಿದರೆ ಹೇಗೆ? ಆದುದರಿಂದ ಅದರ ಬಗ್ಗೆ ಒಂದು ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಅಧ್ಯಕ್ಷರು : ಮಾನ್ಯ ಸತ್ಯನಾರಾಯಣರವರೇ ಸದನಕ್ಕೆ ಬಂದಾಗ ಅದರ ಬಗ್ಗೆ ಹೇಳುತ್ತಾರೆ. ಏಕೆಂದರೆ ಅವರೇ ಧರಣಿಯನ್ನು ಮಾಡಿದರೋ ಅಥವಾ ಧರಣಿಯನ್ನು ಮಾಡುತ್ತಿದ್ದ ಜಾಗಕ್ಕೆ ಮಂತ್ರಿಗಳು ಹೋಗಿದ್ದರೋ ಎಂಬ ಬಗ್ಗೆ ಅವರನ್ನು ಕರೆಸಿ ಆಮೇಲೆ ಹೇಳಿಕೆ ಮಾಡಿಸೋಣ ಬಿಡಿ. ಇದನ್ಯಾಕೆ ಮತ್ತೆ ಚರ್ಚೆ ಮಾಡುತ್ತಾ ಹೋಗುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಆಯಿತು.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ. ಗೌರವಾನ್ವಿತ ಸದಸ್ಯರಾದ ರಾಜಣ್ಣನವರು ಭಾಷಣ ಪ್ರಾರಂಭ ಮಾಡಬೇಕು.

(ಶ್ರೀ ಚಂದ್ರಶೇಖರ ಎಂ. ಮಾಮನಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)